# ಆಯುಕ್ತರ ಕಛೇರಿ, ನಗರಾಭಿವೃದ್ದಿ ಪ್ರಾಧಿಕಾರ ಚಿಕ್ಕಮಗಳೂರು

## :::: ಅಲ್ಪಾವದಿ ಟೆಂಡರ್ ಪ್ರಕಟಣೆ ::::

ನಂ.ನಅಪ್ರಾಚಿ : ಹಿವಬ : ಕಾಮಗಾರಿ : 1, 2 : 2008 - 09. ದಿನಾಂಕ: 10 - 11 - 2008.

ಈ ಕೆಳಕಂಡ ಕಾಮಗಾರಿ ಕೆಲಸಕ್ಕೆ ನಿಯಮಿತ ಫಾರಂಗಳಲ್ಲಿ ಟೆಂಡರನ್ನು ಸೂಚಿಸಿದ ದರ್ಜೆಯ ನೊಂದಾಯಿತ ಅಥವಾ ನವೀಕೃತ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕೆಲಸದ ಅಂದಾಜು ಮೊತ್ತವನ್ನು ಕೆಳಗೆ ತಿಳಿಸಲಾಗಿದೆ. ಆಯುಕ್ತರು ನಗರಾಭಿವೃದ್ದಿ ಪ್ರಾಧಿಕಾರ, ಚಿಕ್ಕಮಗಳೂರು ಇವರು ಟೆಂಡರ್ ಫಾರಂಗಳನ್ನು ತಮ್ಮ ಕಛೇರಿಯಲ್ಲಿ ಕೆಳಗೆ ಸೂಚಿಸಿದ ದಿನಾಂಕದಂದು ಮದ್ಯಾನ್ಹ 4.00 ಗಂಟೆವರೆಗೆ ಸ್ವೀಕರಿಸುವುದು, ಟೆಂಡರ್‌ಗಳನ್ನು ಗುತ್ತಿಗೆದಾರರ ಸಮ್ಮುಖದಲ್ಲಿ ಅಥವಾ ಅವರಿಂದ ನೇಮಿತರಾದ ಏಜೆಂಟರ ಸಮ್ಮುಖದಲ್ಲಿ ಸಾದ್ಯವಾದಲ್ಲಿ ಅದೆ ದಿನ ತೆರೆಯಲಾಗುವುದು.

ಖಾಲಿ ಟೆಂಡರ್ ಫಾರಂಗಳನ್ನು ಮತ್ತು ಷಡ್ಯೂಲ್‌ಗಳನ್ನು ಆಯುಕ್ತರು ನಗರಾಭಿವೃದ್ದಿ ಪ್ರಾಧಿಕಾರ ಚಿಕ್ಕಮಗಳೂರು ಇವರಲ್ಲಿ ಈ ಕೇಳಗೆ ನಮೂದಿಸಿರುವ ಕಾಲಂ ಸಂಖ್ಯೆ 10 ಮತ್ತು 11 ರಲ್ಲಿ ತಿಳಿಸಿರುವ ದಿನಾಂಕದಂದು ನಿಗದಿತ ಹಣ ಪಾವತಿಮಾಡಿ ಪಡೆಯಬಹುದಾಗಿರುತ್ತದೆ. ಹೀಗೆ ಪಾವತಿಸಲಾದ ಟೆಂಡರ್ ಷಡ್ಯೂಲ್‌ಗಳ ವೆಚ್ಚವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲಾ. ಇತರೆ ವಿಷಯಗಳನ್ನು ಆಯುಕ್ತರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ಕೊಡದೆ ನಿರಾಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಇ. ಎಂ. ಡಿ. ಹಣವನ್ನು ನಗದು / ಡಿ. ಡಿ ರೂಪದಲ್ಲಿ ಮಾತ್ರ ಸ್ವೀಕರಿಸಲಾಗುವುದು. " ಡಿ. ಡಿ. ಯನ್ನು ಆಯುಕ್ತರು ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರ ಚಿಕ್ಕಮಗಳೂರು" ಇವರ ಹೆಸರಿನಲ್ಲಿ ಪಡೆಯತಕ್ಕದ್ದು, ನಿರುದ್ಯೋಗಿ ಇಂಜಿನಿಯರ್ ಕಂಟ್ರಾಕ್ಟ್‌ದಾರರು ತಮ್ಮ ಡಿಗ್ರಿ ಅಥವಾ ಡಿಪ್ಲೋಮೊ ಸರ್ಟಿಫಿಕೇಟ್‌ಗಳ ನಕಲನ್ನು ಸರ್ಕಾರದ ರಿಯಾಯಿತಿ ಆದೇಶದ ಪ್ರತಿಯೊಂದಿಗೆ ಖಾಲಿ ಟೆಂಡರ್‌ಗಳಿಗಾಗಿ ಮನವಿ ಸಲ್ಲಿಸುವಾಗ ಒದಗಿಸತಕ್ಕದ್ದು ಮತ್ತು ಒಂದು ಕಾಮಗಾರಿಗೆ ಮಾತ್ರ ಇ. ಎಂ. ಡಿ. ಯಿಂದ ರಿಯಾಯಿತಿ ಇರುತ್ತದೆ. ಬಾಕಿ ಕಾಮಗಾರಿಗಳಿಗೆ ಇ. ಎಂ. ಡಿ. ತುಂಬತಕ್ಕದ್ದು, ಮೇಲೆ ವಿಷದಪಡಿಸಿದ ರೂಪದಲ್ಲಿರುವ ಇ. ಎಂ. ಡಿ. ನೀಡದಿದ್ದರೆ ಟೆಂಡರನ್ನು ಪರಿಗಣಿಸಲಾಗುವುದಿಲ್ಲಾ. ಪಿ. ಡಬ್ಲ್ಯೂ. ಡಿ 65 ರೂಲ್ 91 ರ ಪ್ರಕಾರ ಗುತ್ತಿಗೆದಾರರು ಯಾವುದೇ ಫ್ರೀಕರೇಟ್ ಹಾಕಿದರೆ ಗುತ್ತಿಗೆ ತಿರಸ್ಕರಿಸಲಾಗುತ್ತದೆ.

ಗುತ್ತಿಗೆದಾರರು ಸಲ್ಲಿಸುವ ದಾಖಲಾತಿಗಳು ತಪ್ಪು ಮಾಹಿತಿ, ಸುಳ್ಳು ದಾಖಲಾತಿ, ತಪ್ಪು ದಾರಿಗೆ ಎಳೆಯುವುದು, ಹಿಂದಿನ ಕಾಮಗಾರಿಗಳನ್ನು ಸರಿಯಾಗಿ ನಿರ್ವಹಿಸದೆ ಇರುವುದು, ಕಾಮಗಾರಿಯನ್ನು ಪೂರ್ಣಗೊಳಿಸಲು ಅತಿ ನಿಧಾನ ಮಾಡುವುದು, ವ್ಯಾಜ್ಯ ಚಾರಿತ್ರ್ಯವುಳ್ಳವರು ಅಂತಹವರ ಟೆಂಡರನ್ನು ಪರಿಗಣಿಸಲಾಗುವುದಿಲ್ಲ. ಪ್ರತಿಯೊಂದು ಕಾಮಗಾರಿಗಳಿಗೂ ಬೇರೆ ಬೇರೆ ಟೆಂಡರ್ ಹಾಕಬೇಕು. ಟೆಂಡರ್ ಹಾಕುವಾಗ ಯಾವ ಕಾಮಗಾರಿ ಎಂದು ಕ್ರಮ ಸಂಖ್ಯೆಯನ್ನು ಲಕೋಟೆಯ ಮೇಲೆ ಸ್ಪಷ್ಟವಾಗಿ ನಮೂದಿಸತಕ್ಕದ್ದು.

| ಕ್ರ. ಸಂ. | ಕೆಲಸದ ಹೆಸರು | ಟೆಂಡರ್ ಕರೆಯ ಸಂಖ್ಯೆ | ಕರೆಯ ತರಹ | ಕೆಲಸದ ಅಂದಾಜು ರೂ. | ಇ.ಎಂ.ಡಿ ಶೇ 2.5 ರೂ. | ಕೆಲಸ ಮುಗಿಸಲು ನಿಗದಿ ಪಡಿಸಿದ ಕಾಲಾವಧಿ | ಟೆಂಡರ್ ಹಾಕಲು ಅರ್ಹ ಗುತ್ತಿಗೆದಾರರು | ಟೆಂಡರ್ ಫಾರಂ ಬೆಲೆ ರೂ. | ಖಾಲಿ ಟೆಂಡರ್ ಫಾರಂ ಕೋರಿ ಹಣ ಪಾವತಿಸಲು ಕಡೇ ದಿನಾಂಕ | ಖಾಲಿ ಟೆಂಡರ್ ಫಾರಂ ನೀಡಲು ಕಡೇ ದಿನಾಂಕ | ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವಸತಿ ಬಡಾವಣೆಯ 1 ನೇ ಹಂತದಲ್ಲಿ ಡಿ–29 ರಿಂದ ಅಂತ್ಯದವರೆಗೆ ಮತ್ತು ಡಿ–32 ರಿಂದ ಅಂತ್ಯದ ವರೆಗೆ ಚಪ್ಪಡಿ ಚರಂಡಿ ನಿರ್ಮಾಣದ ಕಾಮಗಾರಿ. | ಒಂದನೇ ಕರೆ | ಶೇಕಡಾ | 58000.00 | 1450.00 | 1 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು. | 250.00 | 26-11-2008. | 28-11-2008. | 01-12-2008. |
| 2 | ಚಿಕ್ಕಮಗಳೂರು ನಗರದ ಗೃಹ ಮಂಡಳಿ ಬಡಾವಣೆಯ ಎಂ.ಐ.ಜಿ. – 2 ಸಂಖ್ಯೆ. 187 ರ ಆಯುಕ್ತರ ನಿವಾಸಕ್ಕೆ ಬಣ್ಣ ಬಳಿದು ಕಾಂಪೌಂಡ್ ಗೋಡೆ ನಿರ್ಮಾಣ ಮಾಡಿ ನವೀಕರಿಸುವ ಕಾಮಗಾರಿ. | ಒಂದನೇ ಕರೆ | ಶೇಕಡಾ | 72000.00 | 1800.00 | 1 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು. | 250.00 | 26-11-2008. | 28-11-2008. | 01-12-2008. |
| 3 | ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ 4 ನೇ ಹಂತದಲ್ಲಿ ಕುರುವಂಗಿ ರಸ್ತೆಯ ಪಕ್ಕದಲ್ಲಿರುವ ಉದ್ಯಾನವನಕ್ಕೆ ತಂತಿ ಬೇಲಿ ನಿರ್ಮಾಣ ಕಾಮಗಾರಿ. | ಒಂದನೇ ಕರೆ | ಶೇಕಡಾ | 96000.00 | 2400.00 | 1 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು. | 250.00 | 26-11-2008. | 28-11-2008. | 01-12-2008. |
| 4 | ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ 3 ನೇ ಹಂತದಲ್ಲಿ 18.00 ಮೀಟರ್ ರಸ್ತೆಯ ಪಕ್ಕದಲ್ಲಿರುವ ಉದ್ಯಾನವನಕ್ಕೆ ತಂತಿ ಬೇಲಿ ನಿರ್ಮಾಣ ಕಾಮಗಾರಿ. | ಒಂದನೇ ಕರೆ | ಶೇಕಡಾ | 152000.00 | 3800.00 | 1 ತಿಂಗಳು | 3 ನೇ ದರ್ಜೆ ಮತ್ತು ಮೇಲ್ಪಟ್ಟು. | 250.00 | 26-11-2008. | 28-11-2008. | 01-12-2008. |
| 5 | ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ ಆಶ್ರಯ ಬಡಾವಣೆಯ (ಬಿಷಪ್ ಚರ್ಚ್ ಹಿಂಬಾಗದ ಬಡಾವಣೆ) ಉದ್ಯಾನವನಕ್ಕೆ ತಂತಿ ಬೇಲಿ ನಿರ್ಮಾಣ ಕಾಮಗಾರಿ. | ಒಂದನೇ ಕರೆ | ಶೇಕಡಾ | 45000.00 | 1125.00 | 1 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು. | 250.00 | 26-11-2008. | 28-11-2008. | 01-12-2008. |

ಸಹಿ/–
ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರ
ಚಿಕ್ಕಮಗಳೂರು.

ಸಹಿ/–
ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರ
ಚಿಕ್ಕಮಗಳೂರು.